MR. SPEAKER.—Whatever it is, one thing the Hon. Member must consider it as his mistake. In fact, when I was on my legs, his point of order is in my favor and against him. Secondly, he should not raise any point of order when I am on my legs. I yielded because I would like to have his affection in abundance. When I told him that no point of order can be taken at the time of voting, he did not state any authority. This point of order is against him. After so much of parliamentary experience, I never expected him to raise this point of order.

The question is :

"That the Mysore Appropriation (No. 4) Bill, 1966 be passed."

The motion was adopted.

THE MYSORE AGRICULTURAL PRODUCE MARKETS BILL, 1962

As reported by the Select Committee.

Motion to Consider.

SRI K. PUTTASWAMY (Minister for Co-operation and Housing).—Sir, I beg to move :

"That the Mysore Agricultural Produce Markets Bill, 1962, as reported by the Select Committee be taken into consideration."

MR. SPEAKER.—Motion moved :

"That the Mysore Agricultural Produce Markets Bill, 1962, as reported by the Select Committee be taken into consideration."

† SRI K. PUTTASWAMY.—Sir, this Report was presented to the House some time back. I am sure that the Hon'ble Members had opportunities to go through the recommendations made by the Members of the Select Committee.

The provisions now recommended by the Committee are of substantive nature relating to the regulation of trade and commerce and the Committee felt that they were necessary for the proper working of the Marketting Committees and that they were in public interests. Therefore, the sanction of the President under the proviso to clause (b) of Artical 304 of the Constitution of India for moving the Bill with the amendments in Legislature, was found necessary and it has been obtained.

I need not now bring to the notice of this House the necessity for this legislation. In the five integrating areas, there are five Different enactments relating to Agricultural Produce Market Committees. Though Integration took place about ten years back, it was not possible to bring

(SRI K. PUTTASWAMY)

this uniform legislation. There are different provisions in different areas and in the interests of the grower, it was very necessary to bring a uniform legislation and the Bill was introduced in the Legislature as far back as April 1963. The Select Committee considered the provisions of the Bill in the light of the Report on the working of the Bombay Agricultural Market Act, 1939, drafted by the Committee held under the chairmanship of Dr. T. J. Shernami, Director of Agriculture, Bombay State. This Committee thought that it was advisable to adopt some of the recommendations made in that Report. Therefore the report had to undergo a lot of changes and hence there was some delay. The Committee considered the provisions of the Bill in the month of September and December 1965 and made a number of changes. I do not think it is necessary for me to draw the attention of the House to all the changes that it has made because those changes have been stated in the report and if I begin to narrate them it would only be repetition of the report itself.

One important change that the Committee has recommended is for the establishment of the State Agricultural Marketing Board. It is necessary that the intersts of the growers will have to be taken into consideration at the State level. From the experience of persons actually working in the agricultural sector, it is necessary for Government sometimet to take some policy decisions. So the Select Committee found is necessary to make a recommendation for the establishment of the State Agriculture Marketing Board.

Even in the constitution of the Board certain changes have been made. The number of representatives of agriculturists is 7 in the Board consisting of 12 persons. The strength of the traders and commission agents has been substantially reduced.

Then another change is this. Under the existing Act any member of the Committee is free to become President and Vice-President, but the Seleet Committee thought it desirable to confine it to the representatives of agriculturists. This is an amendment in the interests of the agriculturists because the legislation itself is to safeguard the interests of agriculturists.

There are several other changes which are consequential. As I have already stated, this report was presented about 1½ months ago and I am sure hon'ble members have had time to go through the provisions. If any suggestions are made or if any changes are found necessary, I shall consider them at the stage of consideration of the clauses.

With these words I commend the report for the acceptance of the House.

SRI SIDDAIAH KASHIMATH.—As we are not ready for the discussion of this Bill, I think we may adjourn now and meet tomorrow morning if necessary.

Sri K. P. GADAG (Gadag).—I am prepared to speak now.

Mr. SPEAKER.—A request has come that there is some big function tomorrow for which members are invited and a large number of them are anxious to go. If that is so, I think we might meet a little earlier and adjourn by 5 P.M.

Sri SIDDAIAH KASHIMATH.—Then we might meet at 12 noon.

Mr. SPEAKER.—I do not want to dispense with the Question Hour.

Sri SIDDAIAH KASHIMATH.—Then we might meet at 11-30 A.M. and have question hour for 1 hour till 12-30 P.M.

Mr. SPEAKER.—Is that agreeable to Government ?

Sri K. PUTTASWAMY.—I have absolutely no objection.

Mr. SPEAKER.—In that case, Sri Gadag may speak now. After that, if there is nobody to speak we shall adjurn and meet at 11-30 A.M. tomorrow.

†ಶ್ರೀ ಕೆ. ಪಿ. ಗದಗ್.—ಅಧ್ಯಕ್ಷರೇ, ಈಗ ಮಾನ್ಯ ಸಹಕಾರ ಸಚಿವರು ಮುಂಡಿಸಿರುವ ಸೆಲೆಕ್ಟ್ ಕಮಿಟಿಯವರು ಸಾದರ ಪಡಿಸಿದ ಈ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಬಹಳ ಮಟ್ಟಿಗೆ ಪ್ರಸ್ತಾಪಿಸಿ ಅವುಗಳ ಬಗ್ಗೆ ನನ್ನ ಅಭಿಪ್ರಾಯ ಅಥವಾ ನನ್ನ ವಿಚಾರಗಳನ್ನು ಈ ಮೂಲಕ ಹೇಳ ಬಯಸುತ್ತೇನೆ. ಈ ಬಿಲ್ಲು ಅತಿ ಮಹತ್ವದ ಬಿಲ್ಲು. ಏಕೆಂದರೆ, ಒಕ್ಕಲಿಗರು ಉತ್ಪತ್ತಿ ಮಾಡುವ ಅವರ ಉತ್ಪತ್ತಿ ಗಳನ್ನು ಒಂದು ಕ್ರಮಬದ್ಧವಾದ ಒಂದು ವಿದಾಯಕ ರೀ ಯಿಂದ ಬಿಕರಿಯಾಗುವುದನ್ನು ನೋಡು ವುದೇ ಈ ಬಿಲ್ಲಿನ ಮುಖ್ಯ ಧ್ಯೇಯ. ಒಕ್ಕಲಿಗರು ಮಾಡುವಂತಹ ಅನೇಕ ಉತ್ಪನ್ನಗಳ ಸಂಬಂಧದಲ್ಲಿ ಅನೇಕ ಸಾರಿ ಅವರಿಗೆ ಲುಕ್ಸಾನಾಗುವಂತಹ ಅಥವಾ ಅವರನ್ನು ಶೋಷಣೆಗೆ ಗುರಿಮಾಡುವಂತಹ ವ್ಯವಹಾರಗಳು ಜರುಗುತ್ತಾ ಇದ್ದವು. ಇಂಥ ವ್ಯವಹಾರಗಳು ಜರುಗದಂತೆ ಕ್ರಮಬದ್ಧವಾಗಿ ವ್ಯವಹಾರ ನಡೆಯತಕ್ಕದ್ದು ಅವಶ್ಯ ಎಂದು ತಿಳಿದುಕೊಂಡು ಈ ರೀತಿಯ ಒಂದು ಬಿಲ್ಲು ನನಗೆ ತಿಳಿದಮಟ್ಟಿಗೆ ಬಹುಶಃ 1939ರಲ್ಲಿ ಆಯಿತು. ಅದು 1941ರಲ್ಲಿ ಆಚರಣೆಗೆ ಬಂದಿರಬಹುದು. ಅನೇಕ ವರ್ಷಗಳಿಂದ ಇದು ಜಾರಿಯಲ್ಲಿದ್ದು ತಿದ್ದುಪಡಿಯಾಗಿದೆ. ಈಗ ಸೆಲೆಕ್ಟ್ ಕಮಿಟಿಗೆ ಹೋಗಿ ತಿದ್ದುಪಡಿಯಾಗಿ ಬಂದಿದೆ, ಸಚಿವರು ಹೇಳಿದಂತೆ ಕೆಲವು ಸಂದರ್ಭಗಳಲ್ಲಿ ಅವಧಿ ಹೆಚ್ಚಿಸಿ ದ್ದಾರೆ, ಅನೇಕ ರೀತಿಯಿಂದ ಪರಿಶೀಲಿಸಿದ್ದಾರೆ. ಅವಾಗ್ಯೂ ಒಂದು ದೃಷ್ಟಿಯಿಂದ ಪರಿಶೀಲಿಸಿದರೆ ಇದು ಎಷ್ಟುಮಟ್ಟಿಗೆ ಸರಿಯಾಗಿದೆ ಅಥವಾ ಇಲ್ಲ ಎಂಬುದು ಗೊತ್ತಾಗುತ್ತದೆ. ಕೆಲವು ಕಲಮು ಮತ್ತು ಡೆಫೆನಿಷನ್ನಿನಲ್ಲಿ ನನಗೆ ತಿಳಿದಂತೆ ಇರುವ ಲೋಪದೋಷಗಳನ್ನು ಅಧ್ಯಕ್ಷರ ಮೂಲಕ ನಾನು ಹೇಳಬಯಸುತ್ತೇನೆ.

ಆರಂಭದಲ್ಲಿ ರಿಜ್ಯೆರ್ ಸೇರ್ ಡೆಫೆನಿಷನ್ ಸರಿಯಾಗಿದೆಯೇ ಇಲ್ಲವೇ ಎಂದು ಅನುಮಾನವಿದೆ. ಅದೇನೆಂಬುದನ್ನು ಹೇಳುತ್ತೇನೆ. ಎಲ್ಲ ಅಗ್ರಿಕಲ್ಚರರ್ ಪ್ರಾಡ್ಯೂಸ್ ವ್ಯವಹಾರವಾಗುವಾಗ ಆ ಸನ್ನಿವೇಶದಲ್ಲಿ ವ್ಯವಹಾರ ಮಾಡುವವರು ಲೈಸೆನ್ಸ್ ಪಡೆಯಬೇಕು, ನಿಯಮಗಳ ಪ್ರಕಾರ ವ್ಯವಹಾರ ನಡೆಯಬೇಕು, ನಿಯಮವನ್ನು ಮುರಿಯಬಾರದು. ಲೈಸೆನ್ಸ್ ಇಲ್ಲದೆ ಸಾಮಾನ್ಯ ನಿಯಮಗಳ ಪ್ರಕಾರ ಕೆಲವರು ವ್ಯವಹಾರಮಾಡುತ್ತಾರೆ. ಇನ್ನು ರೀಜ್ಯೆರ್ ಸೇರ್ ವಿಚಾರ ಹೇಳುತ್ತೇನೆ. ರೀಜ್ಯೆರ್ ಸೇರ್ ಡೆಫೆನಿಷನ್ನಿನಲ್ಲಿ domestic consumption ಎಂಬ ಪದ ಬಹಳ ಮಹತ್ವಉಳ್ಳದ್ದು. ಮುಂದೆ ಮಾರ್ಕೆಟ್ ಕಮಿಟಿ determine ಮಾಡುವ ವಿಚಾರವಿದೆ. ಆದರೆ ಡಿಟರ್‌ಮಿನ್ ಮಾಡುವುದು ಸೂಕ್ತವೇ ಎಂಬ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಅನುಮಾನವಿದೆ. ಈಗ ಡೊಮೆಸ್ಟಿಕ್ ಕನ್‌ಸಂಪ್ಷನ್ ಮತ್ತು ರೀಜ್ಯೆರ್ ಸೇರ್ ಬಗ್ಗೆ ಸ್ವಲ್ಪ ವಿವರಿಸುತ್ತೇನೆ. ತಲೆಯಮೇಲೆ ಹೊತ್ತು ಮಾರುವುದಿದೆ, ಉದಾಹರಣೆಗೆ, ಸೇಂಗ ಇದೆ, ಅದನ್ನು ಯಾರೋ ಒಬ್ಬರು ವ್ಯಾಪಾರಸ್ಥರಿಂದ ತಿಗೆದುಕೊಂಡು ತಲೆಯಮೇಲೆ ಹೊತ್ತುಕೊಂಡು ಮಾರಿದರೆ ಅದಕ್ಕೇನು ಮಾಡುತ್ತೀರಿ ? ಅದು ಡೊಮೆಸ್ಟಿಕ್ ಕನ್‌ಸಂಪನ್ ಆಗುವುದಿಲ್ಲ ; ವ್ಯವಹಾರ ವಾಗುತ್ತದೆ, ಅದಕ್ಕೆ ನನ್ನ ಅಭಿಪ್ರಾಯದ ಪ್ರಕಾರ ಬ್ಯಾಂಕರ್ ಲಯಬಲ್ ಆಗುತ್ತಾನೆ.

(ಶ್ರೀ ಕೆ. ಪಿ. ಗದಗ್)

ಇನ್ನೊಂದು ಇದೇ ರೀತಿಯ ಉದಾಹರಣೆ ಕೊಡುತ್ತೇನೆ. ಮಿಲ್ಲಿನೊಳಗೆ ಸರಿಯಾಗಿ ಕೆಲಸಕ್ಕೆ ಬಾರದ ಅರಳೆಯಿರುತ್ತದೆ, ಅದನ್ನು ಯಾರಿಗೋ ಲೈಸೆನ್ಸ್ ಇಲ್ಲದ ಬಡವರಿಗೆ ಕೊಡುತ್ತಾರೆ, ಮೊಕದಂ ಎನ್ನುವವರಿಗೆ ಕೊಡುತ್ತಾರೆ. ಅದು ಡೊಮೆಸ್ಟಿಕ್ ಕನ್‌ಸಂಷನ್ ಅಲ್ಲ. ಅವರು ಲಯಬರ್ ಆಗುತ್ತಾರೆ. ಇದೇ ಪ್ರಕಾರ ಇನ್ನೊಂದು ಸಂಗತಿ ಹೇಳಬೇಕೆಂದರೆ, ವ್ಯವಸಾಯಕ್ಕೆ ಬೇಕಾದ ಬೀಜವನ್ನು ಬೆಳೆದವರಿಂದ ಸೊಸೈಟಿ ತೆಗೆದುಕೊಳ್ಳುವುದು ಡೊಮೆಸ್ಟಿಕ್ ಕನ್‌ಸೆಂಷನ್ ಆಗಬಹುದು. ಹೀಗೆ ಅನೇಕ ರೀತಿಯಿಂದ ನೋಡಿದರೆ ರೀಜೇರ್ ಸೇಲ್‌ನ ಡೆಫೆನಿಷನ್ ಈ ಸಂದರ್ಭಗಳಲ್ಲಿ ಸರಿಹೋಗುವುದಿಲ್ಲ. ರೀಜ್ಯೆರ್ ಟ್ರೇಡ್ ಇರುವುದರಿಂದ ಬಹುಶಃ ಇಂಥವರು ಅಪರಾಧಿಗಳಾಗಬಾರದು ಎಂಬುದು ಈ ಬಿಲ್ಲಿನ ಆಶಯವಿರಬಹುದು. ಆದರೆ ನನ್ನ ತಿಳಿವಳಿಕೆ ಪ್ರಕಾರ ಕಾನೂನು ಪ್ರಕಾರ ಇಂಥವರು ಅಪರಾಧಿಗಳಾಗುವರು. ಆದುದರಿಂದ ಈ ಬಗ್ಗೆ ವಿಚಾರ ಮಾಡುವುದು ಅವಶ್ಯವೆಂದು ಕಾಣುತ್ತದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಇನ್ನು 55ನೆಯ ಕ್ಲಾಜಿನಲ್ಲಿರುವ mode of making contracts ಬಗ್ಗೆ ಸ್ವಲ್ಪ ಹೇಳುತ್ತೇನೆ. ಈ ಕ್ಲಾಜಿನಲ್ಲಿ (1)ನೆಯ ಸಬ್ ಕ್ಲಾಜಿನಲ್ಲಿ 'except with the sanction of the Committee' ಎಂದಿದೆ. ಅದಕ್ಕೆ ಬದಲಾಗಿ " except with the sanction of the Government or Deputy Commissioner " ಎಂದಿರುವುದು ಸೂಕ್ತ. ಇದು ಅಪವ್ಯಯವಾಗುವ ಸಂದರ್ಭವಿದೆ. ಏಕೆಂದರೆ, ಸ್ಥಿರ ಅಸ್ತಿ ಮಾರ್ಕೆಟ್ ಕಮಿಟಿ ಕಡೆ ಇರುತ್ತದೆ. ಒಂದು ಉದಾಹರಣೆ ಹೇಳುತ್ತೇನೆ. ಸರ್ಕಾರದವರು, ಮಾರ್ಕೆಟ್ ಕಮಿಟಿಯವರು ಒಂದು ಮಾರ್ಕೆಟ್ ಕಟ್ಟಿಡ ವಗ್ಗೆರೆ ಕಟ್ಟಿರುತ್ತಾರೆ, ಕಟ್ಟುವಾಗ ಬಹಳ ಸವಿಯಾಗಿ 10—20 ಎಕರೆ ಭೂಮಿ ತೆಗೆದುಕೊಂಡು ಕಟ್ಟಿರುತ್ತಾರೆ. ಆದರೆ ಯಾವುದೋ ಒಂದು ಸಮಿತಿಯವರು ಕೂಡಿ 10 ಸಾವಿರ ರೂಪಾಯಿ ಬೆಲೆ ಬಾಳುವುದನ್ನು 2 ಸಾವಿರ ರೂಪಾಯಿ ನಾಮಿನಲ್ ವ್ಯಾಲ್ಯೂಗೆ ಎರಡನೆಯ ಸಂಸ್ಥೆಗೆ ಕೊಟ್ಟಿರುವ ಉದಾಹರಣೆ ಇದೆ. ಇಂಥ ಅಪವ್ಯಯವಾಗುವುದರಿಂದ ಸಮಿತಿಯವರು ಕೊಡುವುದು ಸೂಕ್ತವಲ್ಲ. ನರಕಾರ ಅಥವ ಡೆಪ್ಯುಟಿ ಕಮಿಷನರು ಮಂಜೂರು ಮಾಡುವುದು ಒಳ್ಳೆಯದು. ಅದಕ್ಕೆ ತಕ್ಕ ಅವಕಾಶ ಮಾಡಬೇಕು. ಸಮಿತಿಯು ಎಷ್ಟೋ ಹೀಗೆ ಮಾಡಬಹುದು. ಇದನ್ನು ವಿಚಾರ ಮಾಡಬೇಕು.

73ನೆಯ ಕ್ಲಾಜಿನಲ್ಲಿ ಮಿಸ್‌ರೆಪ್ರಸಂಟೇಷನ್‌ನಿಂದ ಅಥವಾ ಫ್ರಾಡ್‌ನಿಂದ ಲೈಸೆನ್ಸ್ ಪಡೆದಿದ್ದರೆ ಲೈಸನ್ಸನ್ನು ವಜಾ ಮಾಡಬಹುದು ಎಂದಿದೆ. ಇಂಥ ಸಂದರ್ಭಗಳಲ್ಲಿ ಲೈಸನ್ಸ್ ವಜಾ ಮಾಡುವುದು ಸರಿ. ಆದರೆ (ಬ) ಮತ್ತು ಇತರ ಸಬ್ ಕ್ಲಾಜುಗಳಲ್ಲಿರುವುದನ್ನು ನೋಡಬೇಕು. ಇದರಿಂದ actual working ನಲ್ಲಿ ಏನಾಗುವುದೆಂಬುದನ್ನು ಗಮನಕ್ಕೆ ತರುತ್ತೇನೆ.

4-30 P.M.

ಕ್ಲಾಜ್ 73 (ಬ)ನಲ್ಲಿ ' breach of any of the terms and conditions of the license' ಎಂದು ಇದೆ. ಇದು ಬಹಳ ಚಿಕ್ಕಿಕರ್ ಇರುತ್ತದೆ. ಯಾರೂ ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡುವುದಿಲ್ಲ. ಯಾರಾದರೂ ಹಾಗೆ ಮಾಡಿದರೆ ಅವರ ಲೈಸೆನ್ಸ್ ಕ್ಯಾನ್ಸರ್ ಮಾಡುವಂಥ ಮಟ್ಟಕ್ಕೆ ಹೋದರೆ ಅವರ ವ್ಯವಹಾರಕ್ಕೆ ತೊಂದರೆ ಆಗುತ್ತದೆ. ಲೈಸೆನ್ಸಿನಲ್ಲಿರುವ ಟರ್ಮ್ಸ್ ಮತ್ತು ಕಂಡಿಷನ್‌ಗಳು ಏನಿವೆ ಎನ್ನುವುದು ನನಗೆ ಗೊತ್ತಿದ್ದರೆ ಅದನ್ನು ಪರಿಶೀಲಿಸಿ ಹೇಳಲಿಕ್ಕೆ ಆಗುತ್ತಿತ್ತು. ಆದರೆ ಅವು ನನಗೆ ಗೊತ್ತಿಲ್ಲ. ಉದಾಹರಣೆಗೆ ಇಂತಿಷ್ಟು ಅವಧಿಯೊಳಗೆ ತೂಕ ಮಾಡಬೇಕು ಎಂದು ಇರುತ್ತದೆ. ಆದಕ್ಕೆ ತಪ್ಪಿದರೆ ಅವ ಅದನ್ನು ಬ್ರೇಕ್ ಮಾಡಿದ, ಟರ್ಮ್ಸ್ ಬ್ರೇಕ್ ಮಾಡಿದ, ಎಂದು ತಿಳಿಯುತ್ತಾರೆ. ಒಮ್ಮೊಮ್ಮೆ ತೂಕ ಮಾಡುವವರು ಎಂಟು ಹತ್ತು ವಠಾರಗಳಿಗೆ ಒಬ್ಬ ಇರುತ್ತಾನೆ. ಎಷ್ಟು ಪ್ರಯತ್ನ ಮಾಡಿದರೂ ಸಹ ಇಂಥ ನಿಯಮವನ್ನು ಮುರಿಯುವ ಸಂದರ್ಭ ಬರುತ್ತದೆ. ಅಲ್ಲದೆ ವಠಾರಕ್ಕೆ ಪದಾರ್ಥಗಳು ಬಂದಾಗ ತೂಕ ಮಾಡುವವನು ಬೇರೆಲ್ಲಿಂದಾದರೂ ಹೋಗಿದ್ದರೆ ಆಗಲೂ ತೊಂದರೆಯಾಗುತ್ತದೆ. ಆದುದರಿಂದ ಟರ್ಮ್ಸ್ ಅಂಡ್ ಕಂಡಿಷನ್ಸ್ ಬ್ರೇಕ್ ಮಾಡಿದ್ದರೆ ಎಂದು ಲೈಸೆನ್ಸನ್ನು ರದ್ದುಮಾಡಿದ್ದೇವೆಂದರೆ ಅವನಿಗೆ ಕಷ್ಟವಾಗುತ್ತದೆ. ಇದರ ಮೇಲೆ ಅಪೀಲ್ ಹೋಗಿ ತನ್ನ ಲೈಸನ್ಸ್ ಪಡೆಯಲು ಅವಕಾಶವಿದೆ ಎಂದು ಹೇಳಬಹುದು. ಆದರೆ ಇಂಥ ಸಣ್ಣ ಕಾರಣಗಳಿಂದ ವ್ಯಾಪಾರಸ್ಥನಿಗೆ ಏನು ತೊಂದರೆಯಾಗುತ್ತದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅವನ ವ್ಯಾಪಾರ ಬಂದ್ ಆದರೆ ಆ ಒಂದು ಸೀಸನ್ ಪೂರ್ತಿ ವ್ಯಾಪಾರ ಇಲ್ಲದಂತಾಗುತ್ತದೆ. ಇದರಿಂದಾಗಿ ಅವನು ಮಾರ್ಕೆಟಿಂಗ್ ಸೊಸೈಟಿಯವರು ಹೇಳಿದಹಾಗೆ ಕೇಳುವಂಥ ಪರಿಸ್ಥಿತಿ ಬರುತ್ತದೆ. ಒಂದು ಸಣ್ಣ ತಪ್ಪು ಇದ್ದರೆ ಅವನಿಗೆ

ವಾರ್ನಿಂಗ್ ಕೊಟ್ಟು ಅಥವಾ ಏನಾದರೂ ದಂಡ ಹಾಕಬಹುದು. ಆದರೆ ಅವನ ಲೈಸೆನ್ಸ್ ಕ್ಯಾನ್ಸಲ್ ಮಾಡುವಂಥದ್ದು ನೂಕ್ತವಲ್ಲ. ಇದರಿಂದ ಸ್ವಲ್ಪಮಟ್ಟಿಗೆ ಕಿರುಕುಳ ಆದೀತು ಎಂದು ಕಾಣಿಸುತ್ತದೆ. ಎಂಥ ಬ್ರೀಚ್ ಎಂದು ಇಲ್ಲ. 'any breach' ಎಂದರೆ ತೊಂದರೆಯಾದೀತು.

ಕ್ಲಾಜ್ 73 (2)ರ ಪ್ರಕಾರ ಚೇರ್‌ಮನ್ ಆದವರಿಗೆ ಒಂದು ತಿಂಗಳವರೆಗೆ ಲೈಸೆನ್ಸ್ ರದ್ದು ಮಾಡುವುದಕ್ಕೆ ಅಧಿಕಾರವಿದೆ. ಇದರ ಮೇಲೆ ಇಂತಿಷ್ಟು ದಿವಸದಲ್ಲಿ ಅಪೀಲು ಮಾಡಬಹುದು ಎಂದೂ ಇದೆ. ನಿಜವಾಗಿಯೂ ಮಾರ್ಕೆಟ್ ಕಮಿಟಿಯವರು ಒಂದು ಉತ್ತಮ ಧ್ಯೇಯದಿಂದ ಹೋದರೆ ಚೆನ್ನಾಗಿರುತ್ತದೆ. ಒಮ್ಮೊಮ್ಮೆ ಯಾವುದೋ ಒಂದು ಕಾರಣದಿಂದ ಪಕ್ಷ, ಅಥವಾ ಹಗೆಗಡ, ಅಥವಾ ರಾಜಕೀಯ ಭಿನ್ನಾಭಿಪ್ರಾಯಗಳಿಂದ—ಅನೇಕ ಸಾರಿ ಈ ಪ್ರಕಾರದ ತೊಂದರೆಗಳು ಬರುತ್ತವೆ—ಅವರ ಲೈಸೆನ್ಸನ್ನೂ ರದ್ದುಮಾಡಿದರೆ ಆಗ ಇದು ಒಂದು ಶಸ್ತ್ರವಾಗಿ, ಮಾರ್ಕೆಟ್ ಕಮಿಟಿಯಲ್ಲಿ ಆಗಿ ಒಮ್ಮೊಮ್ಮೆ, ಶಾಂತರೀತಿಯಿಂದ ಇರುವ ವ್ಯಾಪಾರಸ್ಥರಿಗೂ ತೊಂದರೆಯಾಗುವ ಸಂಭವವುಂಟು. ಅಪೀಲು ಮಾಡುವುದು ಎಂದು ಏನಿದೆ, ಅದನ್ನು ಮಾರ್ಕೆಟಿಂಗ್ ಅಫೀಸರಿಗೆ, ಟ್ರಿಬ್ಯುನಲ್ಲಿಗೆ ಹಾಕಬಹುದು ಎಂದು ಇದೆ. ಇದರಲ್ಲಿ ನಿಷ್ಪಕ್ಷಪಾತವಾಗಿ ನ್ಯಾಯ ಸಿಕ್ಕಬೇಕಾದರೆ ಒಬ್ಬ ಜುಡಿಷಿಯಲ್ ಅಫೀಸರನ್ನು ಮಾಡಿ, ಬೇಕಾದರೆ ಸಿವಿಲ್ ನ್ಯಾಯಾಧೀಶರನ್ನು ಮಾಡಿರಿ. ಆದರೆ ಅದೇ ಇಲಾಖೆಯವರಲ್ಲಿ ಅಪೀಲು ಹೋಗುವಂತೆ ಮಾಡಬೇಡಿ. ನಿಷ್ಪಕ್ಷಪಾತದಿಂದ ನ್ಯಾಯ ದೊರೆಯಬೇಕಾದರೆ ಅದು ಜುಡಿಷಿಯರಿಗೆ ಹೋಗಬೇಕು, ಅಧಿಕಾರಿಗಳ ಪುಟ್ಟದಲ್ಲಿ ಇರುವ ಇಲಾಖೆಯವರೇ ಮಾಡುತ್ತಾರೆ ಎನ್ನುವುದು ನನಗೆ ಸರಿಯಾಗಿ ಕಾಣುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಇಲಾಖೆಯಲ್ಲಿ ಆದ ತೀರ್ಮಾನಗಳ ಬಗ್ಗೆ ಅವೇ ಇಲಾಖೆಯಲ್ಲಿರುವ ಅಧಿಕಾರಿಗಳ ಹತ್ತಿರ ಅಪೀಲು ಹೋಗಬಾರದು ಎಂದು ಹೇಳಿದರು. ಒಬ್ಬ ತಹಸೀಲ್ದಾರ್ ಮಾಡಿದ ತೀರ್ಮಾನದ ಮೇಲೆ ಅಸಿಸ್ಟೆಂಟ್ ಕಮೀಷನರಿಗೆ, ಅಸಿಸ್ಟೆಂಟ್ ಕಮೀಷನರ್ ಮಾಡಿದ ತೀರ್ಮಾನದ ಮೇಲೆ ಡೆಪ್ಯುಟಿ ಕಮೀಷನರಿಗೆ ಅಪೀಲು ಮಾಡಬಾರದು, ಅವರು ತೀರ್ಮಾನ ಮಾಡಬಾರದು ಎಂದು ಹೇಳುತ್ತಾರೆಯೇ ?

ಶ್ರೀ ಕೆ. ಪಿ. ಗದಗ್.—ನನ್ನ ಅಭಿಪ್ರಾಯ ಇಷ್ಟು. ಹೆಚ್ಚು ನ್ಯಾಯ ದೊರೆಯಬೇಕು ಎಂದರೆ ತತ್ವಶಃ ಅದೇ ಇಲಾಖೆಯವರು ಅಪೀಲು ವಿಚಾರಣೆ ಮಾಡುವುದು ಸರಿಯಲ್ಲ.

ಕ್ಲಾಜ್ 76ರಲ್ಲಿ ವ್ಯವಸಾಯದ ಉತ್ಪನ್ನಗಳ ಮಾರಾಟದ ವಿಷಯಗಳನ್ನು ಹೇಳಿದ್ದಾರೆ. ಇದರ ಪ್ರಕಾರ ಹೋದರೆ ಮುಖ್ಯವಾಗಿ ಬಾಯಿಮಾತಿನ ಒಪ್ಪಂದದ ಪ್ರಕಾರ ಮಾರಾಟ ಮಾಡಿದರೆ ಅದರಿಂದ ಬಹಳ ಬೇನರವಾಗುತ್ತದೆ ಎಂದರೆ ತಪ್ಪಾಗಲಾರದು. ಒಕ್ಕಲುತನದ ಉತ್ಪತ್ತಿಗೆ ಯೋಗ್ಯ ಬೆಲೆ ಬರಬೇಕಾದರೆ ಅದಕ್ಕೆ ಟೆಂಡರ್ ಪದ್ಧತಿ ಇರಬೇಕು ಇಲ್ಲ ಹರಾಜು ಇರಬೇಕು ಎನ್ನುವುದು ನನ್ನ ಅಭಿಪ್ರಾಯವಿದೆ. ಇವೆರಡನ್ನೂ ಬಿಟ್ಟು 'by open agreement' ಎಂದರೆ, ಮಾರುವವನು ಮತ್ತು ತೆಗೆದುಕೊಳ್ಳುವವನು ಇವರಿಬ್ಬರೂ ಅಗ್ರಿಮೆಂಟ್ ಪ್ರಕಾರ ವ್ಯಾಪಾರ ಮಾಡುವುದಕ್ಕೆ ಕೊಟ್ಟರೆ ಎಷ್ಟರಮಟ್ಟಿಗೆ ಸರಿಯಾಗುತ್ತದೆ ಎನ್ನುವುದನ್ನು ನೋಡಬೇಕು.

"By reference to a known Standard" ಎಂದರೆ ಅದರ ಅರ್ಥವೇನು ಎನ್ನುವುದು ನನಗೆ ಅಷ್ಟು ಸರಿಯಾಗಿ ಆಗುವುದಿಲ್ಲ. ನಾನು ಹೇಳುವುದು ಏನೆಂದರೆ, ಮಾರಾಟ ಮಾಡುವಾಗ ಟೆಂಡರ್ ಪ್ರಕಾರ ಅಥವಾ ಆಕ್ಷನ್ ಪ್ರಕಾರ ಮಾಡುವಂತೆ ಮಾತ್ರ ಇರಬೇಕು. ಉಳಿದ ಸಂದರ್ಭಗಳನ್ನು ಏಕೆ ಇದರಲ್ಲಿ ಹಾಕಿದ್ದಾರೆ ಎನ್ನುವುದು ನನಗೆ ತಿಳಿಯಲಾರದು.

ಕ್ಲಾಜ್ 85ರಲ್ಲಿ 'ಟ್ರೇಡರ್ಸ್ ಅಂಡ್ ಸೆಕ್ಯೂರಿಟಿ ಫಾರ್ ಟ್ರೇಡಿಂಗ್' ಎನ್ನುವುದರಲ್ಲಿ ವ್ಯಾಪಾರಸ್ಥರನ್ನು ಎ, ಬಿ, ಸಿ, ಹೀಗೆ ಮಾಡಿರುವುದು ಸರಿಯೇ ? ಎನ್ನುವುದು ನನಗೆ ತಿಳಿಯದು. ಇದರಲ್ಲಿ (ಎ) ವರ್ಗದವರು 1,500 ರೂಪಾಯಿ, (ಬಿ) ವರ್ಗದವರು 1,000 ರೂಪಾಯಿ, (ಸಿ) ವರ್ಗದವರು 500 ರೂಪಾಯಿ ಸೆಕ್ಯೂರಿಟಿಯನ್ನು ಇಡಬೇಕು ಎಂದು ಇದೆ. ವ್ಯಾಪಾರಸ್ಥರು ಸಾಧಾರಣವಾಗಿ, ಎಲ್ಲ ವ್ಯಾಪಾರಸ್ಥರೂ ಪರಸ್ಪರ ವಿಶ್ವಾಸದ ಮೇಲೆ ಲಕ್ಷಾಂತರ ರೂಪಾಯಿಗಳವರೆಗೂ ಒಂದೊಂದು ದಿವಸವೂ ವ್ಯವಹಾರವನ್ನು ಮಾಡುತ್ತಾರೆ. ಇಂಥವರಿಂದ ಸಾವಿರ, 15 ನೂರು ತೆಗೆದುಕೊಳ್ಳುವಂಥದ್ದು ಏಕೆ ? ಇದರ proporiety ಏನು ಎನ್ನುವುದು ನನಗೆ ತಿಳಿಯಲಾರದು. ಇದರ ಉದ್ದೇಶ ಏನು ಎಂದು ವಿಚಾರ ಮಾಡಿದೆ. ನನಗೇ ಅರ್ಥವಾಗಲಿಲ್ಲ. ಯಾವುದೋ ಒಂದು ಅವಾಂತರ ಕಾರಣದಿಂದ ಅವರು ಫೇಲಾಗಿ ಲುಕ್ಸಾನುಪಟ್ಟಿದ್ದಾರೆ. ಲಕ್ಷಾಂತರ ರೂಪಾಯಿಗಳ ವ್ಯಾಪಾರ ಮಾಡತಕ್ಕ ಮನುಷ್ಯ ಒಂದು ಸಾವಿರ ರೂಪಾಯಿಗಳನ್ನು ಇಟ್ಟುಕೊಳ್ಳುವುದು ನನಗೆ ಅರ್ಥವಾಗಲಲ್ಲ. ಇನ್ನು ಮಾರ್ಕೆಟ್ ಕಮಿಟಿಗೆ ಲೈಸೆನ್ಸ್ ಕೊಡುವ ವಿಚಾರ. ಅಲ್ಲಿಗೆ ಬಂದಂಥ ಕಮಾಡಿಟಿ ಏನು ಇರುತ್ತವೆಯೋ ಅವಕ್ಕೆ ಮೊದಲು ಏನು ಫೀ ಇರುತ್ತದೋ ಅದನ್ನು ಕಟ್ಟಬೇಕು.

(ಶ್ರೀ ಕೆ. ಪಿ. ಗದಗ್)

ಆಮೇಲೆ ತೂಕ ಹಾಕಬೇಕು. ಅನಂತರ ಲೈಸೆನ್ಸ್ ಕೊಡಬೇಕು. ಇಲ್ಲದಿದ್ದರೆ ಅಗ್ರಿಕಲ್‌ಚರಲ್ ಮಾರ್ಕೆಟ್ ಕಮಿಟಿಗೆ ಆಕ್ಟ್ರಾಯ್ ಅಥವಾ ಕಮಿಷನ್ ಆಗಲಿ ಯಾರು ಕೊಡುವುದು ? ನಾನು ಅನೇಕ ವರ್ಷಗಳವರೆಗೆ ವ್ಯಾಪಾರ ಮಾಡಿದ್ದೇನೆ. ಇಂತಹ ಸಂದರ್ಭದಲ್ಲಿ ಅದರ ಉದ್ದೇಶ ಏನಿರಬಹುದು ಎಂಬುದನ್ನು ತಿಳಿಯಬೇಕು. ಅನೇಕರಿಗೆ ಅದು ಅತ್ಯವಶ್ಯವಿಲ್ಲ.

ಮಾನ್ಯ ಸಚಿವರು ಈ ಮಸೂದೆಯನ್ನು ಮಂಡಿಸಿದಾಕ್ಷಣ ಕೆಲವು ಮಾತುಗಳನ್ನು ಹೇಳುವಾಗ ಚೇರ್‌ಮನ್ ಮತ್ತು ವೈಸ್ ಚೇರ್‌ಮನ್ ಅಗ್ರಿಕಲ್‌ಚರಲ್ ಕಾನ್‌ಸ್ಟಿಟ್ಯೂಯನ್ಸಿಯಿಂದ ಆರಿಸಿ ಬರುವ ಬಗ್ಗೆ ಒಂದು ತಿದ್ದುಪಡಿಯಾಗಿದೆ, ಏಕೆಂದರೆ ಕೆಲವರು ಅವರ ಮುಖ್ಯ ಉದ್ದೇಶದಂತೆ, ಅಗ್ರಿಕಲ್‌ಚರಲ್ ಏನಿದೆ ಅದನ್ನು ಬಿಟ್ಟು ಉಳಿದ ಕ್ಷೇತ್ರದಿಂದ ಬಂದರೆ ಆಗಬಹುದು ಎಂದು ಹೇಳಿದರು. ಅದು ಕೆಲವರ ಅನುಭವದಿಂದ ಯಶಸ್ವಿಯಾಗಿದೆ. ಅದೇ ಪ್ರಕಾರ ಆದರೆ ಸಂತೋಷ. ಈ ಸಂದರ್ಭದಲ್ಲಿ ಅವರನ್ನು ಪ್ರಿಸೈಡ್ ಮಾಡಬೇಕೆಂದು ಹೇಳತಕ್ಕ ಅವಕಾಶವಿದ್ದರೆ ಅದನ್ನೂ ಸಹ ಮಾಬಹುದು. ಆದರೆ ಅಲ್ಲಿಗೆ ಅಗ್ರಿಕಲ್‌ಚರಲ್ ಕಾನ್‌ಸ್ಟಿಟ್ಯೂಯನ್ಸಿಯಿಂದ ಬಂದರೆ ಸಾರ್ವಾರಣವಾಗಿ ಇದರ ತತ್ವ, ಉದ್ದೇಶಗಳನ್ನು ತಿಳಿದು ಅದಷ್ಟು ತಿಳುವಳಿಕೆ ಇದ್ದವರು ಬಂದರೆ ಬಹಳ ಉತ್ತಮ, ಇಲ್ಲದಿದ್ದರೆ ಆಡಳಿತ ಅಷ್ಟೊಂದು ಸರಿಯಾಗಿ ಆಗದೆ, ಅವರು ಎಲ್ಲಿಯವರೆಗೆ ಚೇರ್‌ಮನ್ ಆಗಿರುತ್ತಾರೋ ಅಲ್ಲಿಯವರೆಗೂ ಅದರ ಆಡಳಿತ ಅಷ್ಟೊಂದು ಚೆನ್ನಾಗಿ ಆಗದಿದ್ದ ಪರಿಸ್ಥಿತಿ ಬರಬಹುದು. ಆದರೆ ನಾನು ಈಗಲೇ ಅದನ್ನು ಅಷ್ಟೊಂದು ಧೈರ್ಯವಾಗಿ ಹೇಳುವುದಿಲ್ಲ. ಒಂದು ವೇಳೆ ಇದನ್ನು ಪ್ರಯೋಗ ಮಾಡಿದರೆ ಅಷ್ಟೊಂದು ಮಹತ್ವ ಕೊಡುವುದಿಲ್ಲ. ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.— May I know whether any Hon'ble Members desires to participate ?

Sri S. SIVAPPA.—The Bill has been brought all on a sudden. We want some more time to go through the Bill.

Mr. SPEAKER.—The Members may please agree amongst themselves and send me a list of members apportioning time to each. The Hon'ble Minister will require 45 minutes for reply. So tomorrow the debate will close at 2-15 P.M. and there would be 45 minutes for the Minister's reply. At 3 P.M. the Bill will be put to vote.

Now, the House will stand adjourned and re-assemble tomorrow at 11-30 A.M.

The House adjourned at Forty-Five Minutes past Four of the Clock to meet again at Thirty Minutes past Eleven of the Clock on Thursday, the 31st March 1966.